**ದಿನಾಂಕಃ 31-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ- 3 ನೇ ಪ್ರತಿವಾದಿ ಪರಃ ಶ್ರೀ ಬಿ.ಎನ್. ವಕೀಲರಿಂದಃ-**

ನನ್ನ ತಂದೆಯ ಕುಟುಂಬ ಕೃಷಿ ಆಧಾರಿತ ಕುಟುಂಬ ಎಂದರೆ ಸರಿ. ನನ್ನ ತಂದೆ ಕುಟುಂಬಕ್ಕೆ ಕೃಷಿ ಹೊರತುಪಡಿಸಿ ಬೇರೆ ಆದಾಯದ ಮೂಲಗಳು ಇಲ್ಲ ಎಂದರೆ ಸರಿ. ಕೃಷಿಯಿಂದ ನನ್ನ ಕುಟುಂಬ ನಾನು ಮನೆಯಲ್ಲಿ ಇದ್ದಾಗ ಖರ್ಚು ಕಳೆದು 2 ರಿಂದ 3 ಲಕ್ಷದವರೆಗೆ ಆದಾಯ ಮಾಡುತ್ತಿದ್ದೆವು. ನಾನು ಒಟ್ಟು ಕುಟುಂಬದಿಂದ 1994 ರಲ್ಲಿ ಹೊರ ಬಂದಿದ್ದೇನೆ. ನಾನು ಒಟ್ಟು ಕುಟುಂಬದಿಂದ ಹೊರ ಬಂದ ನಂತರ 3 ನೇ ಪ್ರತಿವಾದಿ ಮತ್ತು ನನ್ನ ತಂದೆ ಕೃಷಿ ಕೆಲಸ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿ ವಿದ್ಯಾಭ್ಯಾಸ ಮಾಡಿಲ್ಲ ಎಂದರೆ ಸರಿ. ಪರಮೇಶ ಮತ್ತು ದಿನೇಶ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳೆಲ್ಲಾ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ದಾವಾ ಅನುಸೂಚಿ ಐಟಂ ನಂ.5 ರಲ್ಲಿ 3 ನೇ ಪ್ರತಿವಾದಿ ಅಡಿಕೆ ಫಸಲು ಹಾಕಿ ಅಭಿವೃದ್ಧಿಪಡಿಸಿರುತ್ತಾರೆ ಎಂದರೆ ಸರಿ. ಆದ್ದರಿಂದ 3 ನೇ ಪ್ರತಿವಾದಿಗೆ ದಾವಾ ಅನುಸೂಚಿ ಐಟಂ ನಂ.5 ರ ಪೈಕಿ 23 ಗುಂಟೆ ಆಸ್ತಿಯನ್ನ ಬಿಟ್ಟುಕೊಡಲಾಗಿತ್ತು ಎಂದರೆ ಸರಿ. 3 ನೇ ಪ್ರತಿವಾದಿ ಪರವಾಗಿ ಬಿಟ್ಟುಕೊಟ್ಟಿದ್ದ 23 ಗುಂಟೆ ಆಸ್ತಿಯಲ್ಲಿ 3 ನೇ ಪ್ರತಿವಾದಿ ಅದನ್ನ ಫಲವತ್ತತೆ ಮಾಡಿ ಅಡಿಕೆ ಫಸಲನ್ನ ಬೆಳೆಯುತ್ತಿದ್ದರು ಎಂದರೆ ಸರಿ. ಸಾಕ್ಷಿಗೆ 8 ಫೋಟೋಗಳನ್ನ ತೋರಿಸಿ ಅದರಂತೆ 3 ನೇ ಪ್ರತಿವಾದಿ ಅಡಿಕೆ ಫಸಲನ್ನ ಬೆಳೆಯುತ್ತಿದ್ದರು ಎಂದರೆ ಸಾಕ್ಷಿ ಅದನ್ನ ನೋಡಿ ಒಪ್ಪಿರುತ್ತಾರೆ. ಅದನ್ನ ನಿಡಿ-1 ರಿಂದ 8 ಎಂದು ಗುರುತಿಸಲಾಯಿತು. ಈ ದಾವೆಯನ್ನ ನಾನು ದಾಖಲು ಮಾಡಿದ ನಂತರ ನನ್ನ ತಂದೆ 3 ನೇ ಪ್ರತಿವಾದಿಗೆ ದಾವಾ ಅನುಸೂಚಿ ಐಟಂ ನಂ.5 ರ ಪೈಕಿ ಬಿಟ್ಟುಕೊಟ್ಟಿದ್ದ 23 ಗುಂಟೆ ಆಸ್ತಿಯನ್ನ ವಾಪಾಸ್ ಪಡೆದಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ಇತರ ಸಹೋದರರು ಅಡಿಕೆ

**ಫಸಲನ್ನ ಅವರೇ ಕುಯ್ಯುತ್ತಿದ್ದಾರೆ ಎಂದರೆ ಸರಿ. ದಾವಾ ಅನುಸೂಚಿ ಐಟಂ ನಂ.5 ರಲ್ಲಿ 3 ನೇ ಪ್ರತಿವಾದಿಗೆ ಈ ಮೊದಲು ಬಿಟ್ಟುಕೊಟ್ಟಿದ್ದ 23 ಗುಂಟೆ ಆಸ್ತಿಯನ್ನ ಈ ದಾವೆ ಡಿಕ್ರಿಯಾದರೆ ಅವರಿಗೆ ಬಿಟ್ಟುಕೊಡಲು ನನಗೇನೂ ಅಭ್ಯಂತರ ಇಲ್ಲ.**

**<u>ಮರು ಸವಾಲುಃ ಇಲ್ಲಾ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**
**ಓಃಹೇಃಕೇಃಸಃಇಃಎಃಒಃ**

ಸಹಿ/-
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.**

ಎಸ್ಆರ್ಃ